

بِسۡمِ اللّٰہِ الرَّحۡمٰنِ الرَّحِیۡمِ

# ಅಹ್ಮದಿಯರ ಮೇಲೆ ದೌರ್ಜನ್ಯ ತೀವ್ರಗೊಳ್ಳುತ್ತಿದೆ. ಆದರೆ ಜಮಾಅತಿನ ಅಭಿವೃದ್ಧಿಯನ್ನು ತಡೆಯಲು ಯಾರಿಂದಲೂ ಸಾಧ್ಯವಿಲ್ಲ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‍ನ ಐದನೇ ಖಲೀಫ, **ಹಝ್ರ್‌ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನಿನ **'ಬೈತುಲ್ ಫುತೂಹ್'** ಮಸೀದಿಯಲ್ಲಿ **07-04-2017** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರ್‌ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಹಝ್ರ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಜಮಾಅತನ್ನು ಸ್ಥಾಪಿಸುವ ಮೊದಲೇ, ಅವರು ಬೈಅತ್ ಸ್ವೀಕರಿಸುವುದನ್ನು ಪ್ರಾರಂಭಿಸುವ ಮೊದಲೇ ಅವರನ್ನು ಜನರು ವಿರೋಧಿಸಲು ಪ್ರಾರಂಭ ಮಾಡಿದ್ದರು. ಮುಸ್ಲಿಮರೂ ಮುಸ್ಲಿಮೇತರರೂ ಅವರನ್ನು ತೀವ್ರವಾಗಿ ವಿರೋಧಿಸುತ್ತಾ ಇದ್ದರು. ಈಗ ಸಹ ವಿರೋಧಿಸುತ್ತಿದ್ದಾರೆ. ಈಗ ವಿರೋಧಿಸುವವರಲ್ಲಿ ಹೆಚ್ಚು ಮುಂದಾಗಿರುವವರು ಮುಸ್ಲಿಮರಾಗಿದ್ದಾರೆ. ಆದರೆ ಅಲ್ಲಾಹನು ಹಝ್ರ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಜಮಾಅತನ್ನು ವರ್ಧಿಸುತ್ತಾ ಇದ್ದಾನೆ. ಅಲ್ಲಾಹನ ಅನುಗ್ರಹದಿಂದ ಈಗ ಅಹ್ಮದಿಯಾ ಜಮಾಅತ್ 209 ದೇಶಗಳಲ್ಲಿ ಸ್ಥಾಪಿತವಾಗಿದೆ. ವಿಶಿಷ್ಟವಾಗಿ ಮುಸ್ಲಿಮ್ ದೇಶಗಳಲ್ಲಿ ಜನರು ನಮ್ಮ ಜಮಾಅತ್ ಕಡೆಗೆ ಹೆಚ್ಚು ಗಮನ ಹರಿಸುವಾಗ ಅಲ್ಲಿ ಯೋಜನಾ ಬದ್ಧವಾಗಿ ವಿರೋಧ ಪ್ರಾರಂಭವಾಗುತ್ತದೆ. ಕೆಲವು ರಾಜಕಾರಣಿಗಳು, ಮತಪಂಡಿತರು ಮತ್ತು ಅವರ ಪ್ರಭಾವಕ್ಕೊಳಗಾದ ಸರಕಾರಿ ನೌಕರರು ಮಾತ್ರವಲ್ಲ ನ್ಯಾಯಾಲಯಗಳ ನ್ಯಾಯಾಧೀಶರೂ ಸಹ ಈ ವಿರೋಧದಲ್ಲಿ ಸಹಭಾಗಿಗಳಾಗುತ್ತಾರೆ.

ಈಗ ಅಲ್‌ಜೀರಿಯಾದಲ್ಲಿ ಅಹ್ಮದಿಯರನ್ನು ದೌರ್ಜನ್ಯಕ್ಕೆ ಗುರಿಪಡಿಸಲಾಗುತ್ತಿದೆ. ನ್ಯಾಯಾಧೀಶರು ಮತ್ತು ಸರಕಾರಿ ಅಧಿಕಾರಿಗಳು ಹೇಳುತ್ತಾರೆ: ನೀವು ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ಸುಳ್ಳುಗಾರನೆಂದು ಹೇಳಿರಿ, ಅವರು ಮಸೀಹ್ ಮೌಊದ್ ಅಲ್ಲ ಎಂದು ಹೇಳಿರಿ, ಇಸ್ಲಾಮ್ ವಿರುದ್ಧ ಶಕ್ತಿಗಳ ಏಜೆಂಟ್ ಆಗಿದ್ದಾರೆ (ನಊದು ಬಿಲ್ಲಾಹ್), ಇಸ್ಲಾಮ್ ವಿರುದ್ಧ ಶಕ್ತಿಗಳ ಮತ್ತು ಪಶ್ಚಿಮದ ದೇಶಗಳ ಬೆಂಬಲ ಅವರಿಗಿದೆ, ಅವರ ಮೂಲಕವೇ ಅವರು ನಿಲ್ಲಿಸಲ್ಪಟ್ಟಿದ್ದಾರೆ– ವಿಶಿಷ್ಟವಾಗಿ ಆಂಗ್ಲೇಯರ ಮೂಲಕ ಎಂಬುದನ್ನು ನೀವು ಒಪ್ಪಿಕೊಳ್ಳಿರಿ. ಹೀಗೆ ನೀವು ಹೇಳುವುದಾದರೆ ನಿಮ್ಮನ್ನು ನಿರ್ದೋಷಿಗಳಾಗಿ ಅಂಗೀಕರಿಸಿ ನಾವು ಬಿಡುಗಡೆ ಮಾಡುವೆವು ಎಂದು ಹೇಳುತ್ತಾರೆ. ಇಲ್ಲದಿದ್ದರೆ ನೀವು ಸೆರೆಮನೆವಾಸ ಮತ್ತು ದಂಡಪಾವತಿ ಶಿಕ್ಷೆಗೆ ಗುರಿಯಾಗುವಿರಿ.

ಅನಂತರ ದೌರ್ಜನ್ಯ ಭರಿತ ತೀರ್ಪು ನೀಡಿ ಅಹ್ಮದಿಯರನ್ನು ಸೆರೆಮನೆಗೆ ಹಾಕಲಾಗುತ್ತಿದೆ. ಭಾರೀ ಸಂಖ್ಯೆಯ ಹಣದ ದಂಡ ಸಹ ವಿಧಿಸಲಾಗುತ್ತಿದೆ. ಈ ದೌರ್ಜನ್ಯ ಪೀಡಿತರಾದ ನಿಷ್ಕಳಂಕ ಜನರನ್ನು ನಾವು ನಮ್ಮ ಪ್ರಾರ್ಥನೆಗಳಲ್ಲಿ ಒಳಪಡಿಸಬೇಕು. ಅಲ್ಲಾಹನು ಅವರಿಗೆ ಸ್ಥಿರತೆಯನ್ನು ದಯಪಾಲಿಸಲಿ ಮತ್ತು ಅವರನ್ನು ದೌರ್ಜನ್ಯಗಳಿಂದ ರಕ್ಷಿಸಲಿ.

ಅದೇ ರೀತಿ ಪಾಕಿಸ್ಥಾನದ ಅಹ್ಮದಿಯರನ್ನೂ ನಿಮ್ಮ ಪ್ರಾರ್ಥನೆಗಳಲ್ಲಿ ನೆನಪಿಸಿರಿ. ಅಲ್ಲಿ, ವಿಶಿಷ್ಟವಾಗಿ ಪಂಜಾಬ್‌ನಲ್ಲಿ ಯೋಜನಾಬದ್ಧವಾಗಿ ದೌರ್ಜನ್ಯ ಮಾಡಲಾಗುತ್ತಿದೆ. ಮುಸ್ಲಿಮ್ ದೇಶಗಳಲ್ಲಿರುವ ದುರವಸ್ಥೆ ಮತ್ತು ಒಂದು ಮುಸ್ಲಿಮ್ ದೇಶ ಇನ್ನೊಂದು ಮುಸ್ಲಿಮ್ ದೇಶದೊಂದಿಗೆ ಹೊಂದಿರುವ ಸಂಬಂಧದ ಸ್ಥಿತಿ ಬುದ್ಧಿಶಾಲಿಗಳಾದ ಜನರಿಗೆ ಚಿಂತಿಸಲು ಸಾಕಷ್ಟಾಗಿದೆ. ಇಂತಹ ಪರಿಸ್ಥಿತಿಯಲ್ಲಿ ಮುಸ್ಲಿಮ್ ಉಮ್ಮತನ್ನು (ಸಮುದಾಯವನ್ನು) ಸುಧಾರಣೆ ಮಾಡಲು ಅಲ್ಲಾಹನು ತನ್ನ ವಾಗ್ದಾನ ಪ್ರಕಾರ ಯಾರನ್ನು ಕಳುಹಿಸಬೇಕಾಗಿದೆಯೋ ಮತ್ತು ಹಝ್ರ್‌ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ತನ್ನ ಯಾವ ಸತ್ಯಸಂಧನಾದ ಗುಲಾಮನ ಆಗಮನದ ಭವಿಷ್ಯವಾಣಿ ನುಡಿದಿದ್ದರೋ ಆ ವ್ಯಕ್ತಿಯನ್ನು ಮುಸ್ಲಿಮರು ಹುಡುಕಬೇಕಾಗಿದೆ. ಅಲ್ಲಾಹನು ಮತ್ತು ಹಝ್ರ್‌ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ವಿವರಿಸಿದ ಚಿಹ್ನೆಗಳು ಈಡೇರಿವೆ ಮತ್ತು ಈಡೇರುತ್ತಾ ಇವೆ. ಇವುಗಳೆಲ್ಲ ಮಸೀಹ್ ಮೌಊದರ ಆಗಮನವನ್ನು ಸೂಚಿಸುತ್ತವೆ. ಮುಸ್ಲಿಮರ ವೈಭವ ಪುನಃ ಸ್ಥಾಪನೆಗೊಳ್ಳಲು ಸಾಧ್ಯವಿರುವ ಮಾರ್ಗ ಇದೇ ಆಗಿದೆ. ಹಝ್ರ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: "ನಾನು ಅಲ್ಲಾಹನ ವಾಗ್ದಾನ ಪ್ರಕಾರ ಮಸೀಹ್ ಮೌಊದ್ ಆಗಿ ಆಗಮಿಸಿದ್ದೇನೆ. ನೀವು ನಿಮಗಿಷ್ಟವಿದ್ದರೆ ಅಂಗೀಕರಿಸಿರಿ. ತಿರಸ್ಕರಿಸುವುದಾದರೆ ಹಾಗೆ ಮಾಡಿರಿ. ಆದರೆ ನೀವು ತಿರಸ್ಕರಿಸುವುದರಿಂದ ಏನೂ ಆಗಲಾರದು. ಅಲ್ಲಾಹನು ಏನನ್ನು ನಿರ್ಧರಿಸಿರುವನೋ ಅದು ಆಗುವುದು. ನನ್ನನ್ನು ವಿರೋಧಿಸುವವರು ನನ್ನನ್ನಲ್ಲ ಅಲ್ಲಾಹನನ್ನು ವಿರೋಧಿಸುತ್ತಾ ಇದ್ದಾರೆ.

ಅಹ್ಮದಿಯಾ ಜಮಾಅತಿನ ವಿರುದ್ಧ ನಡೆಸಲಾಗುತ್ತಿರುವ ವಿರೋಧಗಳಿಂದ ಹಿಂದೆ ಯಾವುದೇ ರೀತಿಯಲ್ಲಿ ಜಮಾಅತನ್ನು ಹಾನಿಗೊಳಪಡಿಸಲು ಇವರಿಗೆ ಸಾಧ್ಯವಾಗಲಿಲ್ಲ. ಇನ್ನು ಮುಂದೆ ಸಹ ಇನ್‌ಶಾಅಲ್ಲಾಹ್ ಜಮಾಅತಿಗೆ ಯಾವ ಹಾನಿಯನ್ನೂ ಉಂಟುಮಾಡಲು ಅವರಿಗೆ ಸಾಧ್ಯವಾಗಲಾರದು. ಅಲ್ಲಾಹನು ಯಾವಾಗಲೂ ಹಝ್ರ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ಸಹಾಯ ನೀಡುತ್ತಾ ಇದ್ದುದನ್ನು ನಾವು ಕಂಡಿದ್ದೇವೆ. ಶತ್ರುಗಳು ಯಾವಾಗಲೂ ಹೀನೈಸಲ್ಪಟ್ಟವರೂ ನಷ್ಟವನ್ನು ಅನುಭವಿಸಿದವರೂ ಆಗುತ್ತಿದ್ದಾರೆ. ಇನ್‌ಶಾಅಲ್ಲಾಹ್– ಇನ್ನು ಮುಂದೆ ಸಹ ಶತ್ರುಗಳ ಸ್ಥಿತಿ ಹೀಗೆಯೇ ಆಗುವುದು. ವಿರೋಧಗಳು ಎಲ್ಲಿ ಜಾರಿಯಲ್ಲಿರುತ್ತವೆಯೋ

ಅಲ್ಲಿ ತಬ್ಲೀಗ್ ಮಾಡುವ ಮಾರ್ಗಗಳೂ ತೆರೆಯಲ್ಪಡುತ್ತವೆ. ಅಲ್‌ಜೀರಿಯಾದ ಜಮಾಅತ್ ಬಹಳ ಹಳೆಯ ಜಮಾಅತ್ ಅಲ್ಲ. ಅಲ್ಲಾಹನು ಅಲ್ಲಿ ವಿರೋಧಗಳ ಮೂಲಕ ಅಹ್ಮದಿಯರ ವಿಶ್ವಾಸ ದೃಢಗೊಳ್ಳುವಂತೆ ಮಾಡುತ್ತಿದ್ದಾನಲ್ಲದೆ ತಬ್ಲೀಗ್ ಮಾಡುವ ಮಾರ್ಗಗಳನ್ನೂ ಸಹ ತೆರೆಯುತ್ತಿದ್ದಾನೆ. ಅಲ್ಲಿನ ಅಹ್ಮದಿಯರು ಬರೆಯುತ್ತಾರೆ: ನಮ್ಮ ದೇಶದಲ್ಲಿ ತಬ್ಲೀಗ್ ಹೇಗೆ ಮಾಡುವುದೆಂದು ನಾವು ಚಿಂತಿಸುತ್ತಿದ್ದೆವು. ಆದರೆ ಅಲ್ಲಾಹನು ಈ ವಿರೋಧಗಳ ಮೂಲಕ ತಬ್ಲೀಗ್ ಮಾಡುವ ಮಾರ್ಗ ಸ್ವತಃ ತೆರೆದುಕೊಟ್ಟನು.

ಅಲ್‌ಜೀರಿಯಾದ ಅಹ್ಮದಿಯರು ಹೇಳುತ್ತಾರೆ. ಕೆಲವು ಜನರು ನಕಾರಾತ್ಮಕ ಪ್ರಭಾವಕ್ಕೆ ಪಾತ್ರರಾಗಿದ್ದರು. ಆದರೆ ಬಹಳಷ್ಟು ಜನರಿಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ವಾದಗಳ ಬಗ್ಗೆ ಮಾಹಿತಿ ದೊರೆತಿದೆ. ಜಮಾಅತ್ ವಿರುದ್ಧ ನಡೆಯುತ್ತಿರುವ ಕ್ರಮಗಳು ತಪ್ಪಾಗಿವೆ ಎಂದು ಅವರು ಹೇಳುತ್ತಾರೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಆಗಮಿಸುವ ಕಾಲ ಇದೇ ಆಗಿದೆ. ಅಲ್ಲಾಹನ ವಿಧಿ ನಿರ್ಣಯ ಪ್ರಕಾರ ಅವರು ಆಗಮಿಸಿದರು. ಇಸ್ಲಾಮ್ ಧರ್ಮದ ಜೋಲಾಡುತ್ತಿರುವ ನೌಕೆಯನ್ನು ರಕ್ಷಿಸಲು ಅವರು ಆಗಮಿಸಿದರು. ಮುಸ್ಲಿಮರು ಸ್ವತಃ ಹೇಳುತ್ತಿದ್ದಾರೆ. ಪತ್ರಿಕೆಗಳಲ್ಲೂ ವರದಿಗಳು ಬರುತ್ತಿವೆ. ಭಾಷಣಗಳಲ್ಲೂ ಸಹ ಅವರು ಹೇಳುತ್ತಾರೆ, ಮುಸ್ಲಿಮ್ ಸಮುದಾಯವನ್ನು ರಕ್ಷಿಸಲು ಯಾರಾದರೂ ಆಗಮಿಸುವುದು ಆವಶ್ಯಕವಾಗಿದೆ ಎಂದು. ಅದರೊಂದಿಗೆ ಹೀಗೆ ಸಹ ಹೇಳುತ್ತಾರೆ: ಮಿರ್ಝಾ ಗುಲಾಮ್ ಅಹ್ಮದರ ಹೊರತು ಬೇರೆ ಯಾರಾದರೂ ಬರಲಿ ಎಂದು.

ತಾನು ಅಲ್ಲಾಹನಿಂದ ಆಗಮಿಸಿದೆನು ಎಂದು ವಾದಿಸುವ ಮಹಾನುಭಾವರನ್ನು ಈ ಜನರು ನಂಬುವುದಿಲ್ಲ. ಅವರನ್ನು ನಿರಾಕರಿಸುತ್ತಾ ಅವರ ವಿರುದ್ಧ ಹಗೆತನ ಪ್ರಕಟಿಸುತ್ತಿದ್ದಾರೆ. ಹೀಗಿದ್ದರೂ ಲಕ್ಷಾಂತರ ಜನರು ಪ್ರತಿವರ್ಷ ಅಹ್ಮದಿಯಾ ಜಮಾಅತನ್ನು ಪ್ರವೇಶಿಸುತ್ತಾ ಇದ್ದಾರೆ. ಅಹ್ಮದಿಯಾ ಜಮಾಅತಿಗೆ ಅಲ್ಲಾಹನ ಸಹಾಯವಿದೆ, ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ಅಲ್ಲಾಹನ ಸಹಾಯವಿದೆ ಎಂದು ಇದು ಸಾಬೀತುಗೊಳಿಸುತ್ತದೆ. ತಾವು ಹೇಗೆ ಅಹ್ಮದಿಯರಾದೆವು ಎಂದು ಅನೇಕ ಜನರು ಬರೆದು ತಿಳಿಸುತ್ತಿರುವುದನ್ನು ಓದುವಾಗ ಆಶ್ಚರ್ಯವಾಗುತ್ತದೆ– ಅಲ್ಲಾಹನು ಒಳ್ಳೆಯ ಪ್ರಕೃತಿ ಹೊಂದಿದ ಜನರು ಅಹ್ಮದಿಯ್ಯತ್ತನ್ನು ಅಂಗೀಕರಿಸುವುದಕ್ಕೆ ಎಂತಹ ವ್ಯವಸ್ಥೆ ಮಾಡುತ್ತಾನೆಂದು. ಇಂತಹ ಕೆಲವು ಘಟನೆಗಳನ್ನು ವಿವರಿಸುತ್ತೇನೆ.

ಮೊದಲನೆಯದಾಗಿ ನಾನು, ಈಗ ವಿರೋಧ ಬಹಳ ತೀವ್ರವಾಗಿರುವ ಅಲ್‌ಜೀರಿಯದ ಒಂದು ಘಟನೆ ವಿವರಿಸುತ್ತೇನೆ. ಒಬ್ಬರು ನನಗೆ ಹೀಗೆ ಬರೆದು ತಿಳಿಸಿದರು: ಅಹ್ಮದಿಯಾ ಜಮಾಅತ್ ಬಗ್ಗೆ ಪರಿಚಯ ಗಳಿಸುವುದಕ್ಕೆ ಬಹಳ ಕಾಲ ಮೊದಲು ನಾನು ಒಂದು ಸ್ವಪ್ನದಲ್ಲಿ ಹೀಗೆ ಕಂಡೆನು. ಬಹಳ ಎತ್ತರದಲ್ಲಿ ಛಾವಣಿ ಇರುವ ಒಂದು ವಿಶಾಲವಾದ ಹಾಲ್‌ನಲ್ಲಿ ಬಹಳ ಜನರ ಜೊತೆಯಲ್ಲಿ ಒಂದು ಸರತಿಯ ಸಾಲಿನಲ್ಲಿ ನಾನು ನಿಂತಿದ್ದೇನೆ. ಆ ಸಾಲಿನ ತುದಿ ಭಾಗದಲ್ಲಿ ಇಬ್ಬರು ನಿಂತಿದ್ದಾರೆ. ನಮ್ಮ ಸಾಲಿನ ಪ್ರತಿಯೊಬ್ಬ ವ್ಯಕ್ತಿ ಬಲಭಾಗದಲ್ಲಿ ನಿಂತಿರುವ ವ್ಯಕ್ತಿಯ ಜೊತೆ ಬಹಳ ಸಂತೋಷದಿಂದ ಹಸ್ತಲಾಘವ ಮಾಡಿ ಹಾಲ್‌ನ ಬಾಗಿಲಿನ ಕಡೆಗೆ ಹೋಗುತ್ತಿದ್ದಾನೆ. ಬಹಳ ಉದ್ದವಾಗಿರುವ ಈ ಸರತಿಯ ಸಾಲು ಆ ಇಬ್ಬರಲ್ಲಿ ಒಬ್ಬ ವ್ಯಕ್ತಿಯನ್ನು ಹಸ್ತಲಾಘವ ಮಾಡುವ ಉದ್ದೇಶದಿಂದ ಮಾಡಲಾಗಿತ್ತು. ನಾನು ಯೋಚಿಸಿದೆ, ಇಬ್ಬರ ಹಸ್ತಲಾಘವ ಮಾಡುವುದಕ್ಕೆ ಬದಲಾಗಿ ಒಬ್ಬನೊಂದಿಗೆ ಇಷ್ಟು ಸಂತೋಷದಿಂದ ಹಸ್ತಲಾಘವ ಏಕೆ ಮಾಡುತ್ತಿದ್ದಾರೆ. ಇಬ್ಬರಿಗೂ ಏಕೆ ಹಸ್ತದಾನ ಮಾಡುವುದಿಲ್ಲ. ನಾನು ಅವರಿಬ್ಬರ ಸಮೀಪ ತಲಪಿದಾಗ ಅವರಲ್ಲೊಬ್ಬ ಬಿಳಿ ಗಡ್ಡದವರೆಂದೂ ಇನ್ನೊಬ್ಬರು ಮಧ್ಯ ಎತ್ತರ ಹೊಂದಿದ ಮತ್ತು ಕಪ್ಪು ತಲೆಗೂದಲು–ಗಡ್ಡ ಹೊಂದಿದ, ಗೋಧಿ ವರ್ಣದ ವ್ಯಕ್ತಿ ಎಂದೂ ಕಂಡೆನು. ನನ್ನ ಸರತಿ ಬಂದಾಗ ನಾನು ಬಿಳಿ ಗಡ್ಡದವರ ಕಡೆಗೆ ನನ್ನ ಕೈ ಚಾಚಿದಾಗ ಅವರು ಕಪ್ಪು ಗಡ್ಡ ಮತ್ತು ಗೋಧಿ ಬಣ್ಣ ಹೊಂದಿದವರ ಕಡೆಗೆ ಸೂಚಿಸಿ ಹೇಳಿದರು: ಅವರಿಗೆ ಸಲಾಮ್ ಹೇಳಿರಿ. ನಾನು ಬಹಳ ಸಂತೋಷದಿಂದ ಅವರಿಗೆ ಹಸ್ತದಾನ ಮಾಡಿದೆನು. ಆಗ ನನ್ನ ಹೃದಯ ಅವರ ಮೇಲಿನ ಪ್ರೀತಿಯಲ್ಲಿ ಮುಳುಗಿತು. ಅವರು ನನ್ನನ್ನು ನೋಡಿ ಮುಗುಳು ನಗೆ ಬೀರಿದರು. ಆ ಮುಗುಳು ನಗೆಯಲ್ಲಿ ಎಂತಹ ಜಾದು ಇತ್ತೆಂದರೆ ಆ ಮುಗುಳು ನಗೆಯನ್ನು ನಾನು ಇಂದಿನ ತನಕ ಮರೆತುಬಿಡಲಿಲ್ಲ. ನಂತರ ನನಗೆ ಅಹ್ಮದಿಯಾ ಜಮಾಅತ್ ಬಗ್ಗೆ ತಿಳಿಯಿತು. ನಾನು **ಎಂ.ಟಿ.ಎ.** ನೋಡಲು ಪ್ರಾರಂಭಿಸಿದೆ. ಅದರಲ್ಲಿ ಮೊದಲು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಚಿತ್ರ ನೋಡಿದೆ. ಅನಂತರ ಈಗಿನ ಖಲೀಫರ ಚಿತ್ರ ನೋಡಿದೆ. ಆಗ ನನಗೆ ನನ್ನ ಸ್ವಪ್ನ ನೆನಪಾಯಿತು. ಸ್ವಪ್ನದಲ್ಲಿ ಕಂಡ ಬಿಳಿ ಗಡ್ಡದ ವ್ಯಕ್ತಿ ಈಗಿನ ಖಲೀಫರು ಎಂದೂ ಕಪ್ಪು ಗಡ್ಡದವರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಎಂದೂ ತಿಳಿಯಿತು. ಅನಂತರ ಇಂಟರ್‌ನೆಟ್ ಮೂಲಕ ಅಹ್ಮದಿಯರ ಜೊತೆ ಸಂಪರ್ಕ ಸ್ಥಾಪಿಸಿದೆ. ವಿವಿಧ ಪ್ರಶ್ನೆಗಳನ್ನು ಕೇಳಿದೆ. ಉತ್ತರ ಗಳಿಸಿದ ನಂತರ ನಾನು ಬೈಅತ್ ಮಾಡಿದೆ.

ಇನ್ನೊಬ್ಬರಿಗೆ ಸಂಬಂಧಿಸಿದ ಘಟನೆ ಸೂಚಿಸುವುದೇನೆಂದರೆ ಅವರ ಯಾವುದೋ ಒಳ್ಳೆಯ ವಿಷಯ ಅಲ್ಲಾಹನಿಗೆ ಇಷ್ಟವಾಗಿ. ಅವರನ್ನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಬೈಅತ್‌ನಲ್ಲಿ ಸೇರಿಸಿಕೊಳ್ಳಲು ಅಲ್ಲಾಹನು ಇಚ್ಛಿಸಿದನು. ಆ ವ್ಯಕ್ತಿ ಈಜಿಪ್ಟಿನ ಅಬ್ದುಲ್ ಹಾದಿ ಆಗಿದ್ದರು. ಅವರು ಹೀಗೆ ಬರೆಯುತ್ತಾರೆ: **ಎಂ.ಟಿ.ಎ. ಅಲ್ ಅರಬಿಯ್ಯ** ಮೂಲಕ ನನಗೆ ಅಹ್ಮದಿಯ್ಯತ್ತಿನ ಬಗ್ಗೆ ತಿಳಿಯಿತು. ಅದರ ಕಾರ್ಯಕ್ರಮಗಳು ಚೆನ್ನಾಗಿದ್ದುವು. ಆದರೆ ಅಹ್ಮದಿಯಾ ಜಮಾಅತಿನ ಸ್ಥಾಪಕರ ನುಬುವ್ವತ್ ಮತ್ತು ಅವರು ವಹೀ ಇಲ್‌ಹಾಮ್ ಗಳಿಸುವುದು ನನಗೆ ಅರ್ಥವಾಗುತ್ತಿರಲಿಲ್ಲ.

ನಾನು ಪದೇ ಪದೇ **ಅಲ್‌ಜವಾರುಲ್ ಮುಬಾಶಿರ್**‌ಗೆ ಫೋನ್ ಮಾಡಲು ಪ್ರಯತ್ನಿಸಿದೆ. ಆದರೆ ಪ್ರತಿಸಾರಿ ನನಗೆ ಸಂಪರ್ಕ ಸಿಗಲಿಲ್ಲ. ನನ್ನ ಉದ್ದೇಶ ಹೀಗಿತ್ತು: ಅಹ್ಮದಿಯಾ ಜಮಾಅತಿನ ಸ್ಥಾಪಕರು ಇತರ ಪ್ರವಾದಿಗಳ ಹಾಗೆ ನಿಷ್ಕಳಂಕರೇ? ಅವರಿಗೆ ವಹೀ, ಇಲ್‌ಹಾಮ್ ಲಭಿಸುತ್ತಿತ್ತೇ? ಎಂಬ ನನ್ನ ಪ್ರಶ್ನೆಗೆ ಹೌದು ಎಂದು ಉತ್ತರ ಲಭಿಸಿದರೆ ನಾನು ಕೂಡಲೆ ಆ ಚ್ಯಾನಲ್ ನೋಡುವುದನ್ನು ನಿಲ್ಲಿಸುತ್ತಿದ್ದೆ. ನನ್ನ ನಂಬಿಕೆ ಪ್ರಕಾರ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ನಂತರ ವಹೀ, ಇಲ್‌ಹಾಮ್ ಸ್ಥಗಿತಗೊಂಡಿರುತ್ತದೆ. ತನಗೆ ವಹೀ, ಇಲ್‌ಹಾಮ್ ಲಭಿಸುತ್ತದೆ ಎಂದು ಹೇಳುವವರು ಸುಳ್ಳುಗಾರರಾಗಿದ್ದಾರೆ. ಆದರೆ ಅಲ್ಲಾಹನ ವಿಶಿಷ್ಟ ವಿಧಿನಿರ್ಣಯ ಪ್ರಕಾರ ಹೇಗಾಯಿತೆಂದರೆ ನನಗೆ ಫೋನ್ ಸಂಪರ್ಕ ಎಂದೂ ಲಭಿಸಲಿಲ್ಲ. ಆದುದರಿಂದ ನಾನು **ಎಂ.ಟಿ.ಎ.** ನೋಡುವುದನ್ನು ಮುಂದುವರಿಸಿದೆ. ನನಗೆ ಕ್ರಮೇಣ ಖತ್‌ಮೆ ನುಬುವ್ವತ್ ಸಮೇತ ಎಲ್ಲ ವಿಷಯಗಳು ಮನವರಿಕೆ ಆಯಿತು. ಇಮಾಮುಝ್ಝಮಾನ್ ಹಝ್ರತ್ ಮಸೀಹ್ ಮೌಊದ್ ಮತ್ತು ಇಮಾಮ್ ಮಹ್‌ದಿಯನ್ನು ಬೈಅತ್ ಮಾಡದೆ ಬಿಡುವ ಯಾವ ಮಾರ್ಗವೂ ನನ್ನ ಮುಂದೆ ಇರಲಿಲ್ಲ. ಹಾಗೆ ನಾನು ಬೈಅತ್ ಫಾರಂ ಭರ್ತಿಮಾಡಿ ಕಳುಹಿಸಿದೆ. ನಾನು ಬೈಅತ್ ಮಾಡಿದ ನಂತರ ಈ ವಿಷಯ ಇತರರಿಗೂ ತಲಪಲಿ ಎಂದು ನಾನು ಬಯಸಿದೆ. ನಾನು ನನ್ನ ಒಬ್ಬ ಸಮೀಪದ ಸ್ನೇಹಿತನಿಗೆ ಈ ವಿಷಯ ತಿಳಿಸಲು ನಿರ್ಧರಿಸಿದೆ. ಆ ಸ್ನೇಹಿತ ನನ್ನ ಮಾತನ್ನು ಆಲಿಸುವನು ಎಂಬ ಶುಭ ಪ್ರತೀಕ್ಷೆ ನನಗಿತ್ತು. ನಾನು ಅವನಿಗೆ ಅಹ್ಮದಿಯ್ಯತ್ತಿನ ಸಂದೇಶ ತಲಪಿಸಿದಾಗ ಅವನು ನನ್ನ ಪ್ರತೀಕ್ಷೆಗೆ ವಿರುದ್ಧವಾಗಿ ತೀವ್ರವಾಗಿ ಕೋಪಗೊಂಡು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ನಿಂದಿಸಿದನು. ನಾನು ಬಹಳ ದುಃಖಿತನಾಗಿ ಗಾಬರಿಗೊಂಡು ಮನೆಗೆ ಮರಳಿ ನನ್ನ ನಿತ್ಯದ ಅಭ್ಯಾಸ ಪ್ರಕಾರ **ಎಂ.ಟಿ.ಎ.** ಆನ್ ಮಾಡಿದಾಗ ಅದರಲ್ಲಿ ಈ ಪವಿತ್ರ ಖುರ್‌ಆನ್ ವಚನ ಪಾರಾಯಣ ಮಾಡಲಾಗುತ್ತಿತ್ತು:

**ಫಇನ್ ಕಝ್ಝಬೂಕ ಫಖದ್ ಕುಝ್ಝಿಬ ರುಸುಲುನ್ ಮಿನ್ ಖಬ್‌ಲಿಕ, ಜಾಊ ಬಿಲ್ ಬಯ್ಯಿನಾತಿ ವಝ್ಝುಬುರಿ ವಲ್ ಕಿತಾಬಿಲ್ ಮುನೀರ್.**

ಆದ್ದರಿಂದ ಅವರು ನಿನ್ನನ್ನು ಸುಳ್ಳಾಗಿಸಿದರೆ (ಅದೇನೂ ಹೊಸತಲ್ಲ); ಸುಸ್ಪಷ್ಟ ದೃಷ್ಟಾಂತಗಳನ್ನೂ ಸುಜ್ಞಾನ ಗ್ರಂಥಗಳನ್ನೂ ಪ್ರಕಾಶ ಬೀರುವ (ಪ್ರಮಾಣ) ಗ್ರಂಥಗಳನ್ನೂ ತಂದ ಸಂದೇಶವಾಹಕರು ನಿನಗೆ ಮುಂಚೆ ಸುಳ್ಳಾಗಿಸಲ್ಪಟ್ಟಿದ್ದಾರೆ. (ಪವಿತ್ರ ಖುರ್‌ಆನ್ 3: 185).

ಪವಿತ್ರ ಖುರ್‌ಆನಿನ ಈ ವಚನ ಆಲಿಸಿದಾಗ ನನಗೆ ಸಾಂತ್ವನ ದೊರಕಿತು. ಇದು ಆಕಸ್ಮಿಕ ಅಲ್ಲ ಇದು ಅಲ್ಲಾಹನಿಂದ ನನಗೆ ದೊರೆತ ಸಂದೇಶ ಎಂದೇ ನನಗೆ ತೋಚಿತು. ಅಲ್ಲಾಹನ ಸಂದೇಶವಾಹಕರನ್ನು ಸುಳ್ಳುಗಾರರೆಂದು ಹೇಳುವುದು ಅವರನ್ನು ಪರಿಹಾಸ ಮಾಡುವುದು ಹಿಂದೆ ಸಹ ನಡೆದುದಾಗಿದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ಸಂಬಂಧಿಸಿ ಹೀಗೆ ಸಂಭವಿಸಿದರೆ ಇದೇನೂ ಹೊಸ ವಿಷಯವಲ್ಲ ಎಂದು ತಿಳಿಯಿತು.

ಒಬ್ಬ ಮಹಿಳೆಗೆ ಅವರ ಒಳ್ಳೆಯ ಪ್ರಕೃತಿಯ ಕಾರಣ ಅಲ್ಲಾಹನು ಅವರು ಬೈಅತ್ ಮಾಡುವ ಹಾಗೆ ಮಾಡಿದನು. ಆಫ್ರಿಕದ ಗಿನಿ ದೇಶದ ದೊಡ್ಡ ನಗರವಾದ ಬೋಕೇಗೆ ಸಮೀಪದ ಗ್ರಾಮದಲ್ಲಿ ಆಕೆ ವಾಸಿಸುತ್ತಿದ್ದಾರೆ. ಆಕೆ ಹೇಳುತ್ತಾರೆ: ಒಂದು ದಿನ ಅಹ್ಮದಿಯಾ ಜಮಾಅತಿನ ಒಬ್ಬ ಮುಅಲ್ಲಿಮ್ ಬಂದು ತಬ್ಲೀಗ್ ಮಾಡಿದರು. ಜಲ್ಸಸಾಲಾನಕ್ಕೆ ಬರಲು ಆಮಂತ್ರಿಸಿದರು. ನಾನು ಜಲ್ಸದಲ್ಲಿ ಭಾಗವಹಿಸಲು ನಿರ್ಧರಿಸಿದೆ. ಆದರೆ ಮುಸ್ಲಿಮ್ ಸಂಘಟನೆಗಳ ಭಯೋತ್ಪಾದಕ ಕೃತ್ಯಗಳ ಕಾರಣ ನಾನು ಯೋಚಿಸಿದೆ, ಈ ಜಮಾಅತ್ ಸಹ ಅಂತಹದೇ ಆಗಿರಬಹುದು. ನಾನು ಜಲ್ಸಕ್ಕೆ ಹೋಗುವ ನಿರ್ಧಾರ ರದ್ದು ಪಡಿಸಿದೆ. ಆದರೆ ನಾನು ಹೃದಯದಲ್ಲಿ ಪ್ರಾರ್ಥಿಸಿದೆ– ಅಲ್ಲಾಹನೇ, ಈ ಜನರು ಸತ್ಯವಂತರಾದರೆ ಅವರು ಪುನಃ ತಬ್ಲೀಗ್‌ಗೆ ಬರಲಿ ಎಂದು ಪ್ರಾರ್ಥಿಸುತ್ತಿದ್ದೆ. ಅಲ್ಲಾಹನ ಇಚ್ಛೆ ಪ್ರಕಾರ ಅಹ್ಮದಿಯಾ ಜಮಾಅತಿನ ತಬ್ಲೀಗ್ ಗುಂಪು ಆ ಗ್ರಾಮಕ್ಕೆ ಹೋಯಿತು. ಆ ಮಹಿಳೆ ಅಹ್ಮದಿಯರನ್ನು ಕಂಡಾಗ ಸಂತೋಷದಿಂದ ಕಣ್ಣೀರು ಸುರಿಸುತ್ತಾ ಅಲ್ಲಾಹನು ನನ್ನ ಪ್ರಾರ್ಥನೆ ಅಂಗೀಕರಿಸಿದನು ಎಂದು ಹೇಳಿದರು. ಈ ರೀತಿ ಇಡೀ ಕುಟುಂಬ ಅಹ್ಮದಿಯಾ ಜಮಾಅತಿಗೆ ಪ್ರವೇಶಿಸಿತು.

ಗ್ಯಾಂಬಿಯಾದ ಅಮೀರ್ ಸಾಹಿಬರು ಬರೆಯುತ್ತಾರೆ: ನಿಯಾಬೀನಿ ಜಿಲ್ಲೆಯ ಒಂದು ಗ್ರಾಮದ ಒಬ್ಬ ಮಹಿಳೆ ಸುನತ ಸಾಹಿಬ ಜಮಾಅತಿನ ಕಠಿಣ ಶತ್ರುವಾಗಿದ್ದರು. ಆಕೆ ಕೃಷಿಗಾರಿಕೆ ಮಾಡುತ್ತಿದ್ದರು. ಕಳೆದ ಎರಡು ವರ್ಷಗಳಿಂದ ಅವರ ಬೆಳೆ ನಾಶವಾಗುತ್ತಿತ್ತು. ನಮ್ಮ ಒಬ್ಬ ಅಹ್ಮದಿ ಸಹೋದರಿ ಆಕೆಯೊಂದಿಗೆ ಹೇಳಿದರು: ನೀವು ಜಮಾಅತನ್ನು ವಿರೋಧಿಸಲು ಪ್ರಾರಂಭಿಸಿದ ನಂತರ ನಿಮಗೆ ಬೆಳೆನಾಶ ಸಂಭವಿಸುತ್ತದೆ. ನೀವು ಜಮಾಅತನ್ನು ವಿರೋಧಿಸುವುದನ್ನು ಬಿಟ್ಟು ಜಮಾಅತಿಗೆ ಸೇರಿದರೆ ಅಲ್ಲಾಹನು ಅನುಗ್ರಹ ನೀಡುವನು ಎಂದು ಹೇಳಿದರು. ಆ ಮಹಿಳೆ ಹೇಳಿದರು: ಆಗಲಿ ಇದನ್ನು ಪರೀಕ್ಷಿಸಿ ನೋಡುತ್ತೇನೆ. ಆಕೆ ತನ್ನ ಕುಟುಂಬದ ಎಂಟು ಜನರೊಂದಿಗೆ ಜಮಾಅತಿಗೆ ಸೇರಿದರು. ಜಮಾಅತಿಗೆ ಸೇರಿದ ನಂತರ ತನಗೆ ಅಲ್ಲಾಹನು ಬಹಳ ಅನುಗ್ರಹ ನೀಡಿರುವುದಾಗಿ ಆಕೆ ಕಂಡರು. ಆಕೆಗೆ ಹೊಲಗಳಲ್ಲಿ ಧಾರಾಳ ಬೆಳೆ ದೊರೆಯಿತಲ್ಲದೆ ಆಕೆಯ ಯುವಕನಾಗಿದ್ದ ಓರ್ವ ಮಗ ಅನೇಕ ವರ್ಷಗಳಿಂದ ಕಾಣೆಯಾಗಿದ್ದವನು ಇಟಲಿಯಲ್ಲಿರುವುದಾಗಿ ತಿಳಿದು ಅವನೊಂದಿಗೆ ಸಂಪರ್ಕ ಸಾಧಿಸಲು ಸಾಧ್ಯವಾಯಿತು. ಈಗ ಈ ಮಹಿಳೆ ಪ್ರತಿಯೊಬ್ಬರೊಂದಿಗೆ ಹೇಳುತ್ತಿದ್ದಾರೆ: ಅಹ್ಮದಿಯಾ ಜಮಾಅತಿಗೆ ಸೇರಿರಿ. ಇದರಲ್ಲಿ ಮೋಕ್ಷವಿದೆ ಎಂದು.

ಬೆನಿನ್ ದೇಶದ ಮುಬಲ್ಲಿಗ್ ಬರೆಯುತ್ತಾರೆ: ಈ ವರ್ಷ ಮಳೆಗಾಲದಲ್ಲಿ ಬಾಸೀಲ ನಗರದಲ್ಲಿ ಬಹಳ ಗಾಳಿ

ಬೀಸುತ್ತಾ ಧಾರಾಕಾರ ಮಳೆ ಸುರಿಯಿತು. ಈ ಕಾರಣದಿಂದ ಮಿಶನ್ ಹೌಸಿನ ಒಂದು ಗೋಡೆ ಕುಸಿದು ಬಿತ್ತು. ರಾತ್ರಿ ಬಹಳ ಮಳೆ ಬರುತ್ತಾ ಇತ್ತು. ಇನ್ನೊಂದು ಗೋಡೆ ಸಹ ಕುಸಿದು ಬೀಳಬಹುದೆಂಬ ಹೆದರಿಕೆ ಇತ್ತು. ನಾನು ಗಾಬರಿಗೊಂಡು ಪ್ರಾರ್ಥಿಸಿದೆ– ಓ ಅಲ್ಲಾಹ್ ಮಿಶನ್ ಹೌಸಿಗೆ ಸಂಭವಿಸಿದ ಈ ಹಾನಿ ಬೈಅತ್ ಮೂಲಕ ನೀನು ಪರಿಹರಿಸಿಕೊಡು. ಜಮಾಅತಿನ ಅಭಿವೃದ್ಧಿಯಲ್ಲಿ ಅನುಗ್ರಹ ನೀಡು ಎಂದು ಪ್ರಾರ್ಥಿಸಿದೆ. ನಾನು ಪ್ರಾರ್ಥನೆ ಮಾಡಿ ಮುಗಿಸುತ್ತಿರುವಂತೆಯೇ ಫೋನ್ ಗಂಟೆ ಬಾರಿಸಿತು. ರಾತ್ರಿ ಹನ್ನೆರಡು ಗಂಟೆಯ ಸಮಯ. ಬಹಳ ಸಿಡಿಲು ಮಿಂಚು ಕಾಣಿಸುತ್ತಿತ್ತು. ನಾನು ಫೋನ್ ಎತ್ತಿದಾಗ ಮುಹಮ್ಮದ್ ಎಂಬ ಓರ್ವ ವ್ಯಕ್ತಿ ಹೇಳಿದರು ತನ್ನ ಗ್ರಾಮದ ಜನರು ಬೈಅತ್ ಮಾಡಲು ಇಚ್ಛಿಸುತ್ತಾರೆ ಎಂದು. ಅವರ ಗ್ರಾಮ ಮಿಶನ್ ಹೌಸಿನಿಂದ 110 ಕಿಲೋಮೀಟರ್ ದೂರವಿತ್ತು. ನಾನು ಕೆಲವು ದಿನಗಳ ನಂತರ ಆ ಗ್ರಾಮಕ್ಕೆ ಹೋದಾಗ ಅಲ್ಲಿ 198 ಜನರು ಬೈಅತ್ ಮಾಡಿ ಜಮಾಅತಿಗೆ ಸೇರಿದರು.

ಬೆನಿನ್ ದೇಶದ ಮುಬಲ್ಲಿಗ್ ಹೇಳುತ್ತಾರೆ: ನಮ್ಮ ಅಹ್ಮದಿ ಮುಅಲ್ಲಿಮ್ ಹಮ್ದೀ ಜಿಬ್ರೀಲ್ ಸಾಹಿಬರು ಇಲ್ಲಿನ ಸ್ಥಳೀಯ ರೇಡಿಯೋ ಸ್ಟೇಶನ್‌ನಲ್ಲಿ ತಬ್ಲೀಗೀ ಕಾರ್ಯಕ್ರಮ ಬಿತ್ತರಿಸುತ್ತಿದ್ದರು. ಒಂದು ದಿನ ಅವರ ಕಾರ್ಯಕ್ರಮ ಜಾರಿಯಲ್ಲಿದ್ದಾಗ ಒಬ್ಬ ಮಹಿಳೆಯ ಫೋನ್ ಬಂತು. ಮಸೀಹರ ದ್ವಿತೀಯಾಗಮನ ಆಗಿದೆ; ನಮಗೆ ಅದು ತಿಳಿದೇ ಇಲ್ಲ ಎಂದು ತಿಳಿದು ನನಗೆ ಆಶ್ಚರ್ಯವಾಗಿದೆ. ನಾನು ಮುಸ್ಲಿಮಳಾಗಿದ್ದೇನೆ. ಆದರೆ ನನ್ನ ಕುಟುಂಬ ಕ್ರೈಸ್ತರದಾಗಿದೆ. ಅವರು ನನ್ನನ್ನು ನಿರುತ್ತರರನ್ನಾಗಿ ಮಾಡಿ ಹೇಳುತ್ತಾರೆ: ಮುಸ್ಲಿಮರಿಗೆ ಮಾರ್ಗದರ್ಶನ ನೀಡಲು ಈಸಾ ಮಸೀಹ್ ಬರುವವರು ಎಂದು ಅವರೇ ಹೇಳುತ್ತಾರೆ. ಆದುದರಿಂದ ನೀವು ನನ್ನ ಗ್ರಾಮಕ್ಕೆ ಬಂದು ತಬ್ಲೀಗ್ ಮಾಡಿರಿ ಎಂದು ಅವರು ಹೇಳಿದರು. ಆ ಗ್ರಾಮಕ್ಕೆ ಹೋಗಿ ಕೆಲವು ತಬ್ಲೀಗೀ ಕಾರ್ಯಕ್ರಮಗಳನ್ನು ನಡೆಸಿದ ನಂತರ 227 ಜನರು ಬೈಅತ್ ಮಾಡಿ ಅಹ್ಮದಿಯರಾದರು.

(ವಿವಿಧ ದೇಶಗಳಲ್ಲಿ ಅಹ್ಮದಿಯ್ಯತ್‌ಗೆ ಸೇರಿದ ಜನರಿಗೆ ಸಂಬಂಧಿಸಿ ವಿವಿಧ ಘಟನೆಗಳನ್ನು ವಿವರಿಸಿದ ನಂತರ ಹುಝೂರ್ ಹೇಳಿದರು:) ವಿರೋಧಿಗಳಾದ ಮತಪಂಡಿತರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಈ ಮಾತುಗಳ ಬಗ್ಗೆ ಚಿಂತಿಸಬೇಕು. ಅವರು ಹೇಳಿದರು: ನೀವು ನನ್ನನ್ನು ನಂಬದಿದ್ದರೆ ನೀವು ಇನ್ನು ಎಂದೂ ವಾಗ್ದಾನ ಮಾಡಲ್ಪಟ್ಟ ಬೇರೆ ಮಸೀಹರನ್ನು ಕಾಣಲಾರಿರಿ. ನನ್ನ ಉಪದೇಶವೇನೆಂದರೆ ನೀವು ಎಂದೂ ತಕ್ವವನ್ನು ಕೈ ಬಿಡಬೇಡಿರಿ. ನೀವು ಅಲ್ಲಾಹನ ಭಯದೊಂದಿಗೆ ಈ ಮಾತುಗಳ ಬಗ್ಗೆ ಗಾಢವಾಗಿ ಚಿಂತಿಸಿರಿ. ಕೊನೆಗೆ ಅಲ್ಲಾಹನನ್ನು ಬೇಡಿಕೊಳ್ಳಿರಿ. ಅಲ್ಲಾಹನು ಪ್ರಾರ್ಥನೆಗಳನ್ನು ಆಲಿಸುತ್ತಾನೆ. ನೀವು ಉತ್ತಮ ಸಂಕಲ್ಪದೊಂದಿಗೆ ಪ್ರಾರ್ಥಿಸಿದರೆ ಅವನು ನಿಮ್ಮ ಪ್ರಾರ್ಥನೆಗಳನ್ನು ಆಲಿಸಿ ಮಾರ್ಗದರ್ಶನ ನೀಡುವನು. ಜನರು ಅಲ್ಲಾಹನ ಮಾರ್ಗದರ್ಶನ ಗಳಿಸುವ ಅರ್ಹತೆ ಗಳಿಸುವಂತೆ ಅಲ್ಲಾಹನು ಮಾಡಲಿ. ಅಲ್ಲಾಹನು ಅವರ ಹೃದಯಗಳನ್ನು ತೆರೆಯಲಿ – ಆಮೀನ್.

(ಖುತ್‌ಬದ ಕೊನೆಗೆ ಹುಝೂರ್ ಹೇಳಿದರು:) ಜಮುಅ ನಮಾಝ್ ನಂತರ ಒಂದು ನಮಾಝೆ ಜನಾಝ ಗಾಯಿಬ್ ನಿರ್ವಹಿಸುವೆನು. ಮುಕರ್ರಮ್ ಹಾಜಿ **ಲೂಸ್‌ಫ್ರೀನ್ ಹೇನ್‌ಸನ್.** ಡ್ಯಾನಿಶ್ ಅಹ್ಮದಿಯಾಗಿದ್ದರು. ಮೊನ್ನೆ ಅವರು ಮೃತರಾದರು. ಇನ್ನಾಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್. (ಹುಝೂರ್ ಅವರ ನಿಷ್ಠೆ ಮತ್ತು ಜಮಾಅತಿಗೆ ಸಲ್ಲಿಸಿದ ಸೇವೆ ಬಗ್ಗೆ ವಿವರಿಸಿದರು. ಹಾಗೂ ಈ ರೀತಿ ಪ್ರಾರ್ಥಿಸಿದರು) ಅವರ ಆಧ್ಯಾತ್ಮಿಕ ಪದವಿ ಉನ್ನತಗೊಳ್ಳಲಿ. ಅವರ ಪತ್ನಿ, ಮಕ್ಕಳು ಅಹ್ಮದಿಗಳಾಗಿ ಜೀವಿಸುವ ಭಾಗ್ಯ ದೊರಕಲಿ – ಆಮೀನ್.

*****

***Friday Sermon delivered by Hadrath Khaleefatul Masih Al Khamis***[atba]

*At, Masjid Baithul Futhuh, London on 07-04-2017.*

**Summarized by** *Majlis Ansarullah Bharat*

***Kannada Translation:*** M. Ubeidullah for Kannada Desk, Qadian

***Reviewed by:*** M.P Ibrahim | ***Typing:*** U Basheer Ahmad

***Published By:*** Kannada Isha'at Team for Nazarath Nashr-O-Isha'ath, Qadian

***Email***: *khutuba.kannada@gmail.com*

**You can find all the Sermons archived at**: www.alislam.org/friday-sermon